# ಗಾಂಧಿನಗರ ಪೋಸ್ಟ್



## ಆ ದಿನಗಳು ಈ ದಿನಗಳು...

‘ಬರೀ ಖಳನಾಗಿ ಅಬ್ಬರಿಸುವ ಒಂದೇ ವಿಧದ ಪಾತ್ರಗಳನ್ನು ಒಪ್ಪಿಕೊಳ್ಳುತ್ತಾ ಹೋಗಿದ್ದರೆ ನಾನಿಂದು ಕನ್ನಡ ಚಿತ್ರರಂಗದಲ್ಲಿ ಟಾಪ್ ಖಳನಟನಾಗಿ ಮೆರೆಯಬಹುದಿತ್ತೇನೋ’ ಹೀಗೆ ಹೇಳಿ ನಕ್ಕರು ನಟ ಶರತ್ ಲೋಹಿತಾಶ್ವ. ಸದಾ ಕೆಂಡಕಾರುವ ಅವರ ಕಣ್ಣುಗಳೂ ತುಸು ಮೃದುಗೊಂಡು ಆ ನಗುವಿನಲ್ಲಿ ಭಾಗಿಯಾದವು.

‘ಆ ದಿನಗಳು’ ಚಿತ್ರದ ಮೂಲಕ ಕನ್ನಡದ ಪ್ರಮುಖ ಖಳನಟರ ಪಟ್ಟಿಗೆ ಸೇರಿಕೊಂಡಿದ್ದ ಶರತ್ ಅದೇ ಚೌಕಟ್ಟಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡವರಲ್ಲ. ಕಲಾವಿದ ತನ್ನನ್ನು ಯಾವುದೋ ಒಂದು ಇಮೇಜ್‌ಗೆ ಬಲಿ ಕೊಟ್ಟುಕೊಳ್ಳಬಾರದು ಎನ್ನುವ ಅವರು ಈಗ ಕನ್ನಡದಲ್ಲಿಯಷ್ಟೇ ಅಲ್ಲ, ತಮಿಳು ಭಾಷೆಯಲ್ಲಿಯೂ ಬಹುಬೇಡಿಕೆಯ ನಟ. ಅಲ್ಲಿಯೂ ಅವರು ಗುರ್ತಿಸಿಕೊಂಡಿದ್ದು ಭಿನ್ನ ಪಾತ್ರಗಳ ಮೂಲಕವೇ. ತಮಿಳಿನ ತಮ್ಮ ಮೊದಲ ಸಿನಿಮಾದಲ್ಲಿ ಮೃದು ಸ್ವಭಾವದ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರೂ ನಂತರ ಖಳನಾಗಿ ಅಬ್ಬರಿಸಿದ್ದೂ ಇದೆ.

‘ಒಂದು ಪಾತ್ರ ಯಶಸ್ವಿಯಾದಾಗ ನಮ್ಮನ್ನು ಬರೀ ಅವೇ ಮಾದರಿಯ ಪಾತ್ರಗಳು ಅರಸಿಕೊಂಡು ಬರುತ್ತವೆ. ಆಗ ನಾನು ಉದ್ದೇಶಪೂರ್ವಕವಾಗಿ ಆ ಏಕತಾನತೆಯನ್ನು ಮುರಿಯಲು ಬಯಸುತ್ತೇನೆ. ಕಮರ್ಷಿಯಲ್ ಚೌಕಟ್ಟಿನೊಳಗಡೆಯೇ ನಮ್ಮೊಳಗಿನ ನಟನನ್ನು ಬೆಳೆಸುವಂಥ ಪಾತ್ರಗಳಲ್ಲಿ ನಟಿಸಲು ಬಯಸುತ್ತೇನೆ’ ಎನ್ನುವ ಶರತ್ ಅವರು ಕೆಲಮೊಮ್ಮೆ ಅನಿವಾರ್ಯವಾಗಿ ರಾಜಿ ಮಾಡಿಕೊಂಡಿರುವುದೂ ಇದೆ.

ಹೊಸತಾಗಿ ಕನ್ನಡ ಚಿತ್ರ ಮಾಡುತ್ತಿರುವವರ ಕುರಿತೂ ಅವರಿಗೆ ಸಿಹಿ ಕಹಿ ಮಿಶ್ರಿತ ಅಭಿಮತವಿದೆ. ‘ನನಗೆ ಪಾತ್ರ ಮುಖ್ಯ. ಆದರೆ ಕೆಲವರು ಮೊದಲ ಸಲ ಮಾತಾಡುವಾಗಲೇ ಸಂಭಾವನೆ ಎಷ್ಟು ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಾರೆ. ಅಂದರೆ ಅವರಿಗೆ ಪಾತ್ರಕ್ಕಿಂತ ಸಂಭಾವನೆ ಮುಖ್ಯ ಅಂತಾಯಿತು. ಅಂಥವರ ಜತೆ ಹೇಗೆ ಕೆಲಸ ಮಾಡಲು ಸಾಧ್ಯ?’ ಎಂದು ಬೇಸರಿಂದಲೇ ಪ್ರಶ್ನಿಸುತ್ತಾರೆ. ಇನ್ನು ಕೆಲವರು ಯಾವ ತಯಾರಿಯೂ ಇಲ್ಲದೆ ಕೇವಲ ಒಂದು ಕಥೆ ಇಟ್ಟುಕೊಂಡು ಅವರ ಬಳಿ ಬಂದು ನಟಿಸಿ ಎಂದು ಕೇಳಿಕೊಳ್ಳುವುದೂ ಇದೆ. ಆಗೆಲ್ಲ ಮೊದಲೊಂದಿಷ್ಟು ಬುದ್ಧಿ ಮಾತು ಹೇಳಿ, ಕೇಳದಿದ್ದರೆ ತಾವೇ ಕೂತು ತಮ್ಮ ಪಾತ್ರವನ್ನು ತಿದ್ದುಪಡಿ ಮಾಡಿಕೊಳ್ಳುವುದೂ ಇದೆ.

‘ಕೊನೆಗೂ ನಮ್ಮ ಹೊಟ್ಟೆಪಾಡೂ ಮುಖ್ಯವಲ್ಲವೇ?’ ಎಂಬ ಪ್ರಶ್ನೆ ಮುಂದಿಟ್ಟು ಮಾರ್ಮಿಕವಾಗಿ ನಗುತ್ತಾರೆ ಅವರು.



## ಭಿನ್ನ ಬಣ್ಣಗಳ ಚಿತ್ತಾರದಲ್ಲಿ ಮಾನ್ವಿತಾ

2015ರಲ್ಲಿ ‘ಕೆಂಡಸಂಪಿಗೆ’ ಚಿತ್ರದಲ್ಲಿ ಅಳುಮುಂಜಿ ಹುಡುಗನ ಸಂತೈಸುವ ದಿಟ್ಟೆಯ ಪಾತ್ರದ ಮೂಲಕ ‘ಚಂದನವನ’ಕ್ಕೆ ಪಾದವೂರಿದ್ದ ಚೆಂದಕಣ್ಣಿನ ಹುಡುಗಿ ಮಾನ್ವಿತಾ ಹರೀಶ್. ಅವರೀಗ ಅವಕಾಶಗಳ ಆಕಾಶದಲ್ಲಿ ಭಿನ್ನ ಬಣ್ಣಗಳ ಕಾಮನಬಿಲ್ಲು ಕಟ್ಟುವಲ್ಲಿ ನಿರತರಾಗಿದ್ದಾರೆ. ಒಂದು ಸಿನಿಮಾ ಯಶಸ್ವಿ ಆದಮೇಲೆ ಸಿಕ್ಕ ಸಿಕ್ಕ ಪಾತ್ರಗಳನ್ನೆಲ್ಲ ಒಪ್ಪಿಕೊಳ್ಳುವುದು ಗಾಂಧಿನಗರದಲ್ಲಿ ಕಂಡುಬರುವ ಸಾಮಾನ್ಯ ಜಾಯಮಾನ. ಆದರೆ ಈ ಹುಡುಗಿ ಆ ಪರಿಧಿಯಿಂದ ಕೊಂಚ ಆಚೆಗಿದ್ದಾರೆ.

‘ನಾಯಕಿಯ ಪಾತ್ರ ಸಿಕ್ಕರೆ ಯಾವ ಸಿನಿಮಾದಲ್ಲಿಯಾದರೂ ನಟಿಸುತ್ತೇನೆ’ ಎಂಬುವವರಿಗಿಂತ ಕೊಂಚ ಭಿನ್ನವಾಗಿ ‘ಒಳ್ಳೆಯ ಪಾತ್ರ ಸಿಕ್ಕರೆ ಯಾವ ಸಿನಿಮಾದಲ್ಲಿಯಾದರೂ ನಟಿಸುತ್ತೇನೆ’ ಎನ್ನುವವರು ಮಾನ್ವಿತಾ. ಇದಕ್ಕೆ ಕಳೆದ ವರ್ಷ ಬಿಡುಗಡೆಯಾದ ‘ಚೌಕ’ ಸಿನಿಮಾವೇ ಸಾಕ್ಷಿ. ಆ ಚಿತ್ರದಲ್ಲಿ ಮಾನ್ವಿತಾ ಒಂದೇ ಹಾಡಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಅವರ ವೃತ್ತಿಜೀವನಕ್ಕೊಂದು ಸಕಾರಾತ್ಮಕ ‘ಇಮೇಜ್’ ತಂದುಕೊಟ್ಟ ಹಾಡು ಅದು. ‘ಅಪ್ಪಾ ಐ ಲವ್ ಯೂ’ ಹಾಡಿನ ಮೂಲಕ ಅವರು ತೆರೆಯ ಮೇಲಷ್ಟೇ ಅಲ್ಲ, ಸಹೃದಯರ ಮನಸ್ಸಿನಲ್ಲಿಯೂ ಮಗಳ ಭಾವ ತುಂಬಿದ್ದಾರೆ.

ಅವರು ಒಪ್ಪಿಕೊಂಡಿರುವ ಸಿನಿಮಾಗಳನ್ನು ಗಮನಿಸಿದರೂ ಅವರೊಳಗಿನ ಭಿನ್ನತೆಯ ಹಂಬಲ ಸ್ಪಷ್ಟವಾಗಿ ಗೋಚರಿಸುತ್ತದೆ. ಇತ್ತೀಚೆಗೆ ಬಿಡುಗಡೆಯಾಗಿರುವ ಅವರು ಸಿನಿಮಾ ‘ಕನಕ’. ಈ ಚಿತ್ರದಲ್ಲಿ ಅವರು ವೈದ್ಯೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಮತ್ತೊಂದು ಬಹುನಿರೀಕ್ಷಿತ ಚಿತ್ರ ‘ಟಗರು’. ಸದ್ಯ ಸಾಕಷ್ಟು ಸದ್ದು ಮಾಡುತ್ತಿರುವ ‘ಮೆಂಟಲ್ ಹೋ ಜಾವಾ..’ ಹಾಡು ಮತ್ತು ಅದರ ಸ್ಟಿಲ್ಸ್‌ಗಳ ಮೂಲಕವೇ ಠಪೋರಿಯಾಗಿ ಪಪ್ಪಾಂಗುಬ್ಚಿ ಹಾಕಿರುವುದು ಗೊತ್ತಾಗುತ್ತದೆ. ಸೂರಿ ನಿರ್ದೇಶನದ ‘ಟಗರು’ ಚಿತ್ರದಲ್ಲಿ ಅವರು ಶಿವರಾಜ್ ಕುಮಾರ್ ಜತೆ ತೆರೆ ಹಂಚಿಕೊಂಡಿದ್ದಾರೆ. ಈ ಚಿತ್ರದಲ್ಲಿನ ನಟನೆ ತನಗೆ ಮತ್ತಷ್ಟು ಭಿನ್ನ ಅವಕಾಶಗಳನ್ನು ತಂದುಕೊಡುತ್ತದೆ ಮತ್ತು ಅಂಥ ಒಂದೊಂದು ಹೊಸ ರೀತಿಯ ಪಾತ್ರಗಳ ಮೂಲಕವೂ ತಮ್ಮ ವೃತ್ತಿಜೀವನದ ಚಿತ್ರವನ್ನು ವರ್ಣಮಯಗೊಳಿಸುವ ಕನಸು ಅವರದು.